International Journal of Kannada Research 2016; 2(1): 16-19

International Journal of Kannada Research
www.kannadajournal.com

ISSN: 2454–5813
IJSR 2016; 2(1): 16-19
© 2016 IJKS
www.kannadajournal.com
Received: 05-11-2015
Accepted: 06-12-2015

**Chaya Bharatnoor**
Assistant Proffesor,
Department of Music,
Sharnbasweshwar College of
Arts, Kalaburagi-585103.

**Correspondence**
**Chaya Bharatnoor**
Assistant Proffesor,
Department of Music,
Sharnbasweshwar College of
Arts, Kalaburagi-585103.

# Bhartiya Sangeetada Itihas (Part-I)

**Chaya Bharatnoor**

**ಸಂಗೀತದ ಉಗಮ:**

ಭಾರತೀಯ ಸಂಗೀತವನ್ನು ಅಧ್ಯಯನ ಮಾಡುವ ಮೊದಲು ಸಂಗೀತದ ಉಗಮದ ಕುರಿತು ಗಮನಿಸಬೇಕಾಗುತ್ತದೆ.

ಸಂಗೀತ ಅತ್ಯಂತ ಪ್ರಾಚೀನವಾದ ಕಲೆಗಳಲ್ಲಿ ಒಂದು. ಇದರ ಉಗಮದ ಕುರಿತು ಸಾಕಷ್ಟು ಚರ್ಚೆಗಳು ನಡೆದಿವೆ. 'ಮಾನವನ ಬುದ್ಧಿಯ ವಿಕಾಸವಾದಂತೆ, ತನಗಿಷ್ಟವಾದ ಆಹಾರವನ್ನು ಅರಸುವಿಕೆ, ಆಹಾರ ಉತ್ಪಾದನೆ, ಆಹಾರವನ್ನು ಸಿದ್ಧಗೊಳಿಸುವಿಕೆ (ಪಾಕ), ಇತ್ಯಾದಿ ಪೋಷಣಾಕ್ರಿಯೆಗಳಲ್ಲಿ ಸುಧಾರಣೆಯನ್ನು ಕಂಡುಕೊಂಡ. ಇದರ ಜೊತೆಗೆ ಶಬ್ದ ನಿರ್ಮಾಣವನ್ನೂ ವೃದ್ಧಿಸಿಕೊಂಡ. ಉಲ್ಲಾಸಾದಿ ಸಂವೇದನೆಗಳ ಪ್ರಸಂಗಗಳಲ್ಲಿ ಅಂತ್ಯಸ್ವರವನ್ನು ಬಳಸಿ ಶಬ್ದಗಳಿಗೆ ನಾದದ ಸ್ಪರ್ಶವನ್ನು ನೀಡುವ ಪ್ರವೃತ್ತಿಯನ್ನು ಬೆಳೆಸಿಕೊಂಡನು. ಅಂತ್ಯಸ್ವರವನ್ನು ವಿಸ್ತರಿಸುವ ಈ ನೈಸರ್ಗಿಕ ಪ್ರವೃತ್ತಿಯು ಹುಟ್ಟಿಕೊಂಡ ಸಮಯವೇ ಸಂಗೀತದ ಉಗಮ ಕಾಲವಾಗಿರಬಹುದು ಎಂಬ ಕಲ್ಪನೆಯಿದೆ.1 ಕಾರಣವೆಂದರೆ, ಸಂಗೀತ ಮತ್ತು ಗದ್ಯಗಳ ನಡುವಿನ ಮೂಲಭೂತ ವ್ಯತ್ಯಾಸ ಇದೇ ಆಗಿದೆ. ಸಂಗೀತದ ದನಿಗೆ ವಿಸ್ತಾರವಿದೆ ಮತ್ತು ಗದ್ಯದ ದನಿ ವಿಸ್ತಾರ ರಹಿತವಾಗಿದೆ. ವಾದ್ಯಗಳ ದನಿಯು ಅನುರಣನದಿಂದಾಗಿ ವಿಸ್ತರಿಸಲ್ಪಡುತ್ತದೆ ಮತ್ತು ಕಂಠಮೂಲದ ದನಿಯು ಸುಖ ದುಃಖಾದಿ ಸಂವೇದನೆಗಳಿಂದಾಗಿ ವಿಸ್ತಾರಗೊಳ್ಳುತ್ತದೆ. ಹೀಗೆ ವಿಸ್ತರಿಸಲ್ಪಟ್ಟ ದನಿಗೆ ನಾದ ಮಾಧುರ್ಯ ಹಾಗೂ ಸಂವಾದಕ್ಷಮತೆಯೊಡಗೂಡಿದರೆ ಅದು 'ಸ್ವರ' ಎನಿಸಿಕೊಳ್ಳುತ್ತದೆ..2 ಹೀಗೆ ಹುಟ್ಟಿಕೊಂಡ ಒಂದು ಸ್ವರವೇ ಏಳು ಸ್ವರಗಳಾಗಿ, ಹನ್ನೆರಡು ಸ್ವರಗಳಾಗಿ ಸಂಗೀತಕಲೆಯಾಗಿ ಮಾರ್ಪಾಡಾಗಿರುವುದನ್ನು ಇತಿಹಾಸದಲ್ಲಿ ಕಾಣುತ್ತೇವೆ. ಸ್ವರವು ಸಂಗೀತವಾಗಿ ಬೆಳೆದದ್ದು ಈ ಅವಧಿಯಲ್ಲಿ.

**ಧಾರ್ಮಿಕ ನಂಬಿಕೆಗಳು:**

ಧರ್ಮ ಮತ್ತು ಸಂಗೀತದ ನಂಟು ಭಾರತದಲ್ಲಿ ಬೆಳೆದದ್ದು ವೇದಗಳ ಕಾಲದಲ್ಲಿ. ಸಂಗೀತದ ಹುಟ್ಟಿನ ಕುರಿತಾಗಿಯೇ ಅನೇಕ ನಂಬಿಕೆಗಳು ಸಂಗೀತಲೋಕದಲ್ಲಿ ಕಂಡು ಬರುತ್ತವೆ. ಸಾಮಾನ್ಯವಾಗಿ ಎಲ್ಲ ಭಾರತೀಯ ವಿದ್ವಾಂಸರು ಹಿಂದೂ ಧರ್ಮದ ಮೂಲ ಗ್ರಂಥಗಳಾದ ವೇದ ಹಾಗೂ ಪುರಾಣಗಳನ್ನು ಆಧಾರವಾಗಿಟ್ಟುಕೊಂಡು ಬೇರೆ ಬೇರೆ ದೃಷ್ಟಿಕೋನದಿಂದ ಸಂಗೀತದ ಹುಟ್ಟಿನ ಬಗೆಗೆ ಚರ್ಚಿಸಿದ್ದಾರೆ.3 ಆದಿ ವಿಷ್ಣು ತನ್ನ ಮಗನಾದ ಬ್ರಹ್ಮದೇವನಿಗೆ ಎಲ್ಲರಿಗಿಂತ ಮೊದಲು ಸಂಗೀತವನ್ನು ಹೇಳಿದನು ಎಂಬುದು ಸಹ ಒಂದು ನಂಬಿಕೆಯೇ. ಮುಂದೆ ಬ್ರಹ್ಮನು ಸರಸ್ವತಿಗೆ ಕಲಿಸಿದನು. ಈ ಕಾರಣಕ್ಕಾಗಿ ಆಕೆಯ ಕೈಯಲ್ಲಿ ವೀಣೆ ಇರುವ ಕಲ್ಪನೆ ಮೂಡಿಬಂದಿದೆ. ಮುಂದೆ ಸರಸ್ವತಿಯು ನಾರದನಿಗೆ, ನಾರದನು ತುಂಬುರು, ಗಂಧರ್ವ, ಯಕ್ಷ, ಕಿನ್ನರರಿಗೆ ಸಂಗೀತವನ್ನು ಕಲಿಸಿದನೆಂದು ನಂಬಿಕೆಯಿದೆ. ಸ್ವರ್ಗಲೋಕದ ವಾಸಿಗಳಾಗಿದ್ದ ಭರತ, ಹನುಮಂತ, ನಾರದರು ಸಂಗೀತ ಕಲೆಯನ್ನು ಪ್ರಚಾರ ಮಾಡುವುದಕ್ಕಾಗಿಯೇ ಭೂಮಿಯ ಮೇಲೆ ಅವತರಿಸಿದರೆಂದು ಅನೇಕ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ. ಇನ್ನೊಂದು ಅಭಿಪ್ರಾಯದ ಪ್ರಕಾರ ನಾರದನ ಅನೇಕ ವರ್ಷಗಳ ತಪಸ್ಸಿನ ಫಲವಾಗಿ ಶಿವನು ಅವನಿಗೆ ಸಂಗೀತ ಕಲೆಯನ್ನು ದಯಪಾಲಿಸಿದನು. ಹೀಗೆ ಸಂಗೀತದ ಉಗಮದ ಕುರಿತಾಗಿಯೇ ಅನೇಕ ನಂಬಿಕೆಗಳು ಸಂಗೀತಲೋಕದಲ್ಲಿವೆ.

ಬ್ರಹ್ಮನು ಈ ಬ್ರಹ್ಮಾಂಡವನ್ನು ಸೃಷ್ಟಿಸಿದ ಮೇಲೆ ಭೂಮಿಯನ್ನು ಸಹ ನಿರ್ಮಾಣ ಮಾಡಿದನು. ಅವನ ಪಶ್ಚಿಮ ಮುಖದಿಂದ ಸಾಮವೇದವು ಹುಟ್ಟಿತೆಂದೂ ಈ ಸಾಮವೇದವೇ ಸಂಗೀತದ ಉಗಮಕ್ಕೆ ಕಾರಣವೆಂದೂ ಹೇಳಲಾಗಿದೆ.4 ಭರತನು ಸಂಗೀತದ ಕುರಿತಾಗಿ ಬೇರೆಯದೇ ನಂಬಿಕೆಯನ್ನು

ಹೊಂದಿದ್ದಾನೆ. ಒಂದು ದಿನ ಭರತನು ದೇವತೆಗಳನ್ನು ಒಂದುಗೂಡಿಸಿ ಕೈಲಾಸದಲ್ಲಿ ಶಿವನ ಸಮ್ಮುಖದಲ್ಲಿ 'ತ್ರಿಪುರ ದಹನ'ವೆಂಬ ನಾಟಕವನ್ನಾಡಿಸುತ್ತಾನೆ. ಇದರಿಂದ ಸಂಪ್ರೀತನಾದ ಶಿವನು ಭರತನಿಗೆ 'ತಂಡು'ವಿನ ಮೂಲಕ ನಾಟ್ಯಶಾಸ್ತ್ರವನ್ನು ಉಪದೇಶಿಸುತ್ತಾನೆ.5 ಸಂಗೀತವು ನಾಟ್ಯಶಾಸ್ತ್ರದ ಒಂದು ಭಾಗವಾಗಿರುವುದರಿಂದ (ಗೀತ ವಾದ್ಯ ತಥಾ ನೃತ್ಯಂ ಸಂಗೀತಮುಚ್ಯತೆ ಎಂಬ ಭರತವಾಕ್ಯವನ್ನು ಇಲ್ಲಿ ನೆನಪಿಸಿಕೊಳ್ಳಬಹುದು) ಅಥವಾ ಸಂಗೀತವೆಂದರೆ ಗೀತೆ, ವಾದ್ಯಗಳು ಹಾಗೂ ನೃತ್ಯಗಳಿಂದೊಡಗೂಡಿದ ಕಲೆ ಎಂಬುದಾಗಿರುವುದರಿಂದ ಶಿವನಿಂದ ಸಂಗೀತ ಹುಟ್ಟಿತು ಎಂದು ಭರತನು ನಂಬುತ್ತಾನೆ. ಹೀಗೆ ಹಿಂದೂಧರ್ಮದ ಅನೇಕ ದೇವಾನುದೇವತೆಗಳು ಸಂಗೀತದೊಂದಿಗೆ ತಳುಕು ಹಾಕಿಕೊಂಡಿರುವುದನ್ನು ನಮ್ಮ ಪ್ರಾಚೀನ ಗ್ರಂಥಗಳು ವಿವರಿಸುತ್ತವೆ. ಈ ವಿವರಗಳೇ ಮುಂದೆ ಸಂಗೀತಲೋಕದಲ್ಲಿ ನಂಬಿಕೆಗಳಾಗಿ ಬೆಳೆದಿರುವುದನ್ನು ಕಾಣುತ್ತೇವೆ.

ಎಲ್ಲ ಕಲೆಗಳೂ ಭಗವದೋಪಾಸನೆಗೆ ಎಂಬುದು ಭಾರತೀಯರ ನಂಬಿಕೆ. ಇದಕ್ಕೆ ಸಂಗೀತವೂ ಹೊರತಾಗಿಲ್ಲ. ಭಾರತೀಯರ ನಂಬುಗೆ ಅಥವಾ ತತ್ವದ ಪ್ರಕಾರ ಮಾನವನ ಪರಮ ಗುರಿ ಮೋಕ್ಷ ಸಾಧನೆಯಾಗಿದೆ. 'ಸಂಗೀತ ಪಾರಿಜಾತ'ವೆಂಬ ಗ್ರಂಥದಲ್ಲಿ ಶ್ರುತಿ, ಸ್ವರ, ವೀಣಾವಾದನ, ತಾಲಜ್ಞಾನಿಗಳು ಪ್ರಯಾಸವಿಲ್ಲದೆ ಮೋಕ್ಷವನ್ನು ಗಳಿಸುತ್ತಾರೆ ಎಂದು ಹೇಳಲಾಗಿದೆ.6 ಕನ್ನಡದ ಪುರಂದರದಾಸರೂ ಇದನ್ನೇ ಹೇಳುತ್ತಾರೆ. 'ತಂಬೂರಿ ಮೀಂಟಿದವ ಭವಾಬ್ಧಿದಾಂಟಿದವ, ತಾಳವನು ತಟ್ಟಿದವ ದುರಿತಗಳ ಅಟ್ಟಿದವ, ಗಾಯನವ ಮಾಡಿದವ ಪುರಂದರ ವಿಠಲನ ಕಂಡವ, ಮುಕ್ತಿಗೋಡಿದವ'7 ಎಂಬ ಉಗಾಭೋಗದಲ್ಲಿ ಸಂಗೀತದಿಂದ ಮುಕ್ತಿಯನ್ನು ಕಾಣಬಹುದು ಎಂಬ ನಂಬಿಕೆ ವ್ಯಕ್ತವಾಗಿದೆ. ಹನ್ನೆರಡನೆಯ ಶತಮಾನದ ವಚನಕಾರರು ಸಂಗೀತವನ್ನು ಬಲ್ಲವರಾಗಿದ್ದರೂ, ಅವರಲ್ಲಿ ಅನೇಕರು ಸಂಗೀತಶಾಸ್ತ್ರ ಕೋವಿದರಾಗಿದ್ದರೂ ಸಂಗೀತದಿಂದಲೇ ಮೋಕ್ಷ ಸಾಧನೆ ಎಂಬಂಥ ವಿಚಾರಗಳನ್ನು ಅವರು ನಂಬುವುದಿಲ್ಲ. ಬದಲಾಗಿ ಸಂಗೀತವನ್ನು ಒಂದು ಮಾಧ್ಯಮವನ್ನಾಗಿಸಿಕೊಂಡು ಸಾಧನಾ ನಿರತರಾಗಿರುವುದನ್ನು ಕಾಣುತ್ತೇವೆ. ಶಿವಶರಣರ ಸಮಕಾಲೀನ ಸಂಗೀತ ಗ್ರಂಥಗಳಲ್ಲಿಯೂ ಸಂಗೀತ ಭಗವಂತನ ಸೇವೆಗೆ ಹುಟ್ಟಿದ ಕಲೆ ಎಂಬಂಥ ವಿಚಾರಗಳು ವ್ಯಕ್ತವಾಗಿರುವುದನ್ನು ಕಾಣಬಹುದು. ಆದರೆ ಶಿವಶರಣರು ಈ ನಂಬಿಕೆಯೊಂದಿಗೆ ಸೂಕ್ತವಾದ ಅಂತರವನ್ನು ಕಾಯ್ದುಕೊಂಡಿದ್ದರು.

ಸಂಗೀತದ ಉಗಮದ ಕುರಿತಾಗಿ ಇರುವ ನಂಬಿಕೆಗಳು ಭಾರತಕ್ಕೆ ಮಾತ್ರ ಸೀಮಿತವಾಗುವುದಿಲ್ಲ. ಫಾರಸಿಯರಲ್ಲಿರುವ ಒಂದು ನಂಬಿಕೆ ಹೀಗಿದೆ. ಒಮ್ಮೆ ಹಜರತ್ ಮೂಸಾ ಕಾಡಿನಲ್ಲಿ ಅಲೆಯುತ್ತಿರುವಾಗ 'ನಿನ್ನ ಭಿಕ್ಷಾಪಾತ್ರೆಯನ್ನು ಕಲ್ಲಿಗೆ ಹೊಡೆ' ಎಂಬ ವಾಣಿ ಕೇಳಿಸಿ ಅವನು ಅದರಂತೆಯೇ ಮಾಡುತ್ತಾನೆ. ಆ ಕಲ್ಲು ಏಳು ತುಕಡಿಗಳಾಗಿ ಪ್ರತಿಯೊಂದರಿಂದಲೂ ನೀರು ಬರತೊಡಗಿತು. ಆ ನೀರು ಹೊರಡಿಸಿದ ಶಬ್ದಗಳೇ ಸಪ್ತಸ್ವರಗಳು.8 ಇಂಥ ಅನೇಕ ನಂಬಿಕೆಗಳು ಪಾಶ್ಚಾತ್ಯರಲ್ಲಿಯೂ ಕಂಡು ಬರುತ್ತವೆ. ಇಂಥ ನಂಬುಗೆಗಳನ್ನು ಭಂಗಗೊಳಿಸುವುದಕ್ಕಾಗಿಯೋ ಎಂಬಂತೆ ಪ್ರಖ್ಯಾತ ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡನು ಸಂಗೀತ ಮಗುವಿನಂತೆ ಬೆಳೆಯಿತು ಎಂದು ಹೇಳುತ್ತಾನೆ. ಹೇಗೆ ಒಂದು ಮಗು ಅಳು, ನಗು, ಚೀರು, ಈ ಕ್ರಿಯೆಗಳಲ್ಲಿ ಸ್ವರವನ್ನು ವ್ಯಕ್ತಗೊಳಿಸುತ್ತದೆಯೋ ಹಾಗೆ ಸಂಗೀತ ಹಂತಹಂತವಾಗಿ ಬೆಳೆಯಿತು ಎಂದು ಅವನ ಅಭಿಪ್ರಾಯವಾಗಿದೆ. ಜೇಮ್ಸ್‌ಲೇಂಗ್ ಎಂಬ ವಿಜ್ಞಾನಿಯು ಮಾನವನ ಬೆಳವಣಿಗೆಯಲ್ಲಿ ಮಾತು, ನಗೆ, ತಿರುಗಾಟಗಳು ತಾನಾಗಿಯೇ ಬೆಳೆದು ಬಂದಂತೆ ಸಂಗೀತವೂ ಬೆಳೆಯಿತು ಎನ್ನುತ್ತಾನೆ.9 ಸಂಗೀತದ ಉಗಮದ ಕುರಿತಾದ ಇಂಥ ವೈಜ್ಞಾನಿಕ ವಿಶ್ಲೇಷಣೆಗಳು ಬರುವುದಕ್ಕಿಂತ ಮೊದಲು ಭಾರತೀಯರಲ್ಲಿ ಮತ್ತು ವಿದೇಶಿಯರಲ್ಲಿ ಅನೇಕ ನಂಬುಗೆಗಳು ಬೆಳೆದು ಬಂದಿರುವುದನ್ನು ಗಮನಿಸಬಹುದು. ಭಾರತದ ಗುಡಿಗಳಲ್ಲಿ ಸಂಗೀತ ಅನುರಣಿಸಿದಂತೆ, ಪಾಶ್ಚಾತ್ಯದೇಶಗಳಲ್ಲಿನ ಚರ್ಚುಗಳಲ್ಲಿಯೂ ಸಂಗೀತ ಕೇಳಿಬಂತು. ಹಾಗಾಗಿ ಜಗತ್ತಿನಲ್ಲಿ ಸಂಗೀತವು ಕಲೆ ಮತ್ತು ಶಾಸ್ತ್ರದ ರೂಪವನ್ನು ಪಡೆಯುವುದರ ಜೊತೆಜೊತೆಗೆ ಭಗವಂತನನ್ನು ಕಾಣುವ ಮಾರ್ಗವಾಗಿಯೂ ಬಳಕೆಯಾಗಿದ್ದರ ಹಿಂದೆ ಅದರ ಕುರಿತಾದ ನಂಬುಗೆಯೇ ಕಾರಣವಾಗಿದೆ.

ಭರತನಿಂದ ಪ್ರಾರಂಭವಾದ ಕಲೋಪಾಸನೆಯಲ್ಲಿ ಇಲ್ಲಿಯವರೆಗಿನ ಎಲ್ಲ ಶಾಸ್ತ್ರಕಾರರೂ ಸಹ ಸಂಗೀತ ಹುಟ್ಟಿರುವುದೇ ಭಗವಂತನ ಸೇವೆಗಾಗಿ ಎಂದು ಭಾವಿಸಿದ್ದಾರೆ. ಮತಂಗನು ತನ್ನ ಬೃಹದ್ದೇಶಿಯಲ್ಲಿ ಇದನ್ನೇ ಪ್ರತಿಪಾದಿಸುತ್ತಾನೆ. ಬ್ರಹ್ಮನು ನಾದರೂಪನೆಂದು ಸಮ್ಮತಿಸಿದೆ. ಜನಾರ್ದನನು ನಾದರೂಪವುಳ್ಳವನು; ಪರಾಶಕ್ತಿಯು ನಾದರೂಪಳು; ಮಹೇಶ್ವರನೂ ನಾದರೂಪನೇ10 ಎಂದು ಹೇಳುವಲ್ಲಿ ಮತ್ತು ನಾದದ ಮಹತಿಯನ್ನು ಸಾರುವಾಲೇ ಅದು ಭಗವದೋಪಾಸನೆಯ ಮಾರ್ಗ ಎಂಬ ದನಿಯೂ ಅಲ್ಲಿರುವುದನ್ನು ಗಮನಿಸಬಹುದು. ಈ ಕಾರಣಕ್ಕಾಗಿ ಭಾರತೀಯ ಸಂಗೀತದಲ್ಲಿ ಅನೇಕ ನಂಬುಗೆಗಳು ಹಾಸುಹೊಕ್ಕಾಗಿರುವುದನ್ನು ಕಾಣುತ್ತೇವೆ.

**ಐತಿಹಾಸಿಕ ಆಧಾರಗಳು**

ಭಾರತೀಯರ ಇತಿಹಾಸವು ಪ್ರಾರಂಭವಾಗುವುದೇ ಕ್ರಿ.ಪೂ 55000 ವರ್ಷಗಳ ಹಿಂದಿನಿಂದ.11 ಇದನ್ನು ಅಂಧಕಾರ ಯುಗವೆಂದು ಕರೆಯುತ್ತಾರೆ. ನಂತರ ಆರಂಭವಾಗುವುದು ವೇದಗಳ ಕಾಲ. ಆದರೆ ವೇದಗಳಿಗಿಂತಲೂ ಮೊದಲಿನ ಕಾಲದಲ್ಲಿ ಸಂಗೀತ ಹೇಗೆ ವಿಕಾಸಗೊಂಡಿತು ಎಂಬುದನ್ನೂ ನಾವು ಗಮನಿಸಬೇಕಾಗುತ್ತದೆ. ಸಂಗೀತದ ಸಪ್ತಕದಲ್ಲಿ ಏಳು ಸ್ವರಗಳಿವೆ ಎಂದು ಎಲ್ಲರೂ ಹೇಳುತ್ತಾರಾದರೂ ಸಂಗೀತದ ಪಾಠವನ್ನು ಹೇಳುವಾಗ ಎಂಟು ಸ್ವರಗಳನ್ನು ಕಲಿಸುತ್ತಾರೆ. ಒಂದು ಸಪ್ತಕದ ವ್ಯಾಪ್ತಿ ಮಧ್ಯ ಷಡಜ್‌ದಿಂದಾರಂಭಿಸಿ ತಾರಷಡಜ್‌ದ ವರೆಗೂ ಎಂಟುಸ್ವರಗಳಷ್ಟು ವಿಸ್ತಾರಗೊಳ್ಳುತ್ತದೆ. (ಸಾ ರೆ ಗ ಮ ಪ ಧ ನಿ ಸಾ.) ಸಂಗೀತ ಶಾಸ್ತ್ರ ಹುಟ್ಟಿಕೊಳ್ಳುವ ಮೊದಲೇ ಈ ಎಂಟು ಸ್ವರಗಳನ್ನು ಮನುಷ್ಯ ಅರಿತುಕೊಂಡಿದ್ದ. ಹೀಗೆ ಮನುಷ್ಯನು ತನ್ನದಾಗಿಸಿಕೊಂಡ ಎಂಟು ಸ್ವರಗಳಲ್ಲಿ ಮೊದಲಿನ ನಾಲ್ಕು ಸ್ವರಗಳು ಅಂದರೆ ಮಧ್ಯಷಡಜ್, ರಿಷಭ್, ಗಂಧಾರ ಮತ್ತು ಮಧ್ಯಮ ಸ್ವರಗಳು ಪುರುಷನ ದನಿಯಿಂದಲೂ ಮುಂದಿನ ನಾಲ್ಕು ಸ್ವರಗಳು ಅಂದರೆ ಪಂಚಮ, ಧೈವತ, ನಿಷಾದ ಮತ್ತು ತಾರಷಡಜ್ ಇವು ಮಹಿಳೆಯ ಕಂಠದಿಂದ ಹುಟ್ಟಿಕೊಂಡ ಸ್ವರಗಳು ಎಂದು ಗೋವಿಂದರಾವ ಟೇಂಬೆ ಪ್ರತಿಪಾದಿಸುತ್ತಾರೆ.12 ಈಗಲೂ ಸಪ್ತಕದಲ್ಲಿ ಪುರುಷನ ಮೊದಲ ಸ್ವರ ಷಡಜ್ ಮತ್ತು ಮಹಿಳೆಯ ಮೊದಲ ಸ್ವರ ಪಂಚಮ (ಮಹಿಳೆಯರು ಇದೇ ಸ್ವರವನ್ನು ಷಡಜ್‌ನ್ನಾಗಿಸಿಕೊಂಡು ಹಾಡುವುದು ಸಾಮಾನ್ಯವಾಗಿದೆ) ಅವಿಕೃತ ಸ್ವರಗಳಾಗಿರುವುದು ಈ ವಾದಕ್ಕೆ ಪುಷ್ಟಿಯನ್ನು ನೀಡುತ್ತದೆ. ಅಲ್ಲಿಂದ ಪ್ರಾರಂಭವಾದ ಸಂಗೀತ ಮತ್ತು ಮಹಿಳೆಯ ನಂಟು ತನ್ನೊಳಗೆ ಅನೇಕ ರೋಚಕ ಕತೆಗಳನ್ನು ಹುದುಗಿಸಿಕೊಂಡಿದೆ.

**ಸಪ್ತಕದಲ್ಲಿ ಅರ್ಧಪಾಲು**

ಪುರುಷನಿಗೆ ಸರಿಸಮನಾಗಿ ಮಹಿಳೆ ಸಂಗೀತದ ಸಪ್ತಕವನ್ನು ರೂಪಿಸಿದ ಬಗೆ ತುಂಬ ರೋಚಕವಾಗಿದೆ. ದಿನನಿತ್ಯದ ಸಂಸಾರದಲ್ಲಿ ಸ್ತ್ರೀಯರ ಸತತ ಸಾಹಚರ್ಯೆ ಸುಖದಾಯಕ ಎನಿಸುವಷ್ಟು ಮಾನವನ ಜೀವನ ಸುಧಾರಣೆಗೊಂಡಿತು. ಇದರಿಂದಾಗಿ ಪುರುಷ

ಈ ಮೊದಲೇ ನಿರ್ಮಿಸಿದ ಮೊದಲಿನ ನಾಲ್ಕು ಸ್ವರಗಳ ಕಡೆಗೆ ಆಗಿನ ಸ್ತ್ರೀಯರೂ ಆಕರ್ಷಿತಗೊಂಡಿರಬೇಕು. ಅವರೂ ಈ ಸ್ವರಗಳನ್ನು ಸಂತೋಷದಿಂದ ಉಲಿಯತೊಡಗಿದ್ದರೆ ಆಶ್ಚರ್ಯಪಡಬೇಕಿಲ್ಲ. ಆದರೆ ಸ್ತ್ರೀಯರ ಕಂಠರಚನೆ ನೈಸರ್ಗಿಕವಾಗಿ ಹೀಗಿದೆಯಲ್ಲ; ಪುರುಷರು ಹೊರಡಿಸುವ ದನಿಗಿಂತ ಒಂದೂವರೆ ಪಟ್ಟು ಹೆಚ್ಚಿನ ಕಂಪನದಲ್ಲಿದೆ. ಅಂದರೆ ಪುರುಷರು ಹೊರಡಿಸುವ ಮೊದಲಿನ ನಾಲ್ಕು ದನಿಗಳು ಹಾಗೂ ಹೆಂಗಸರ ಕಂಠದಿಂದ ಹೊರಹೊಮ್ಮುವ ನಾಲ್ಕು ಸ್ವರಗಳ ಕಂಪನ ಸ್ಥಾನದಲ್ಲಿ ಒಂದೂವರೆ ಪಟ್ಟು ಹೆಚ್ಚಾಗಿರುವುದು ಮತ್ತು ಈ ಅಂತರ ಕರ್ಣಕಠೋರವಾಗಿರದೆ ಕರ್ಣಾನಂದಕರವಾಗಿರುವುದು ಮನುಷ್ಯನಿಗೆ ತಿಳಿದುಬಂದಿರಬೇಕು. ಕಾಲಕಾಲಕ್ಕೆ ಪುರುಷರ ಕಂಠದಿಂದ ಹೊರಹೊಮ್ಮುವ ನಾಲ್ಕು ಸ್ವರಗಳನ್ನು ಕೇಳಿ ಕೇಳಿ ಅನುಕರಣೆ ಅಥವಾ ನಕಲು ಮಾಡಿ ಅಥವಾ ಹುಚ್ಚುತನದಿಂದ ಪುರುಷರ ದನಿಯನ್ನು ಅಣಕಿಸುವ ಸಲುವಾಗಿ ಅವು ಮಹಿಳೆಯರ ಕಂಠದಿಂದ ಕ್ರಮಬದ್ಧವಾಗಿ ತಕ್ಷಣವೇ ಹೊರಹೊಮ್ಮಿರಬೇಕು. ಇದು ಅನೇಕ ಸಲ ಪುನರಾವರ್ತನೆಗೊಂಡಿರಬೇಕು. ಮತ್ತು ಈ ರೀತಿಯಾಗಿ ಪುರುಷರ ನಾಲ್ಕು ಸ್ವರಗಳು ಮತ್ತು ನಂತರದ ಒಂದೂವರೆ ಪಟ್ಟು ಎತ್ತರದ ಕಂಪನದ ಹೆಂಗಸರ ನಾಲ್ಕು ಸ್ವರಗಳು ಹೀಗೆ ಎಂಟು ದನಿಗಳು ಪರಚಿತವಾಗತೊಡಗಿರಬೇಕು. ಮತ್ತು ಈ ಎಂಟು ದನಿಗಳಿಗೆ ಪ್ರತಿಯೊಂದಕ್ಕೂ 'ಸ್ವರ' ಎಂಬ ಸಂಜ್ಞೆಯನ್ನು ಮುಂದೆ ಕೊಡಲಾಯಿತು. ಹೀಗೆ ಎಲ್ಲ ದೇಶಗಳಲ್ಲಿಯೂ ಎಲ್ಲ ಪ್ರಕಾರದ ಸಂಗೀತದ ಆಧಾರವೆನಿಸಿದ ಷಡಜ್, ರಿಷಭ್, ಗಂಧಾರ, ಮಧ್ಯಮ, ಪಂಚಮ, ಧೈವತ, ನಿಷಾಧ ಹಾಗೂ ಷಡಜ್ (ಸಾ,ರೆ,ಗ,ಮ,ಪ,ಧ,ನಿ,ಸಾ.) ಎಂಬ ಎಂಟು ಪ್ರಾಥಮಿಕ ಸ್ವರಮಾಲಿಕೆ ತನ್ನಿಂದ ತಾನೇ ತಯಾರಾಯಿತು. ಪುರುಷರ ಮತ್ತು ಮಹಿಳೆಯರ ಕಂಠದಲ್ಲಿರುವ ಕಂಪನದ ಒಂದೂವರೆ ಪಟ್ಟು ಅಂತರ ಇಂದಿನವರೆಗೂ ಅವರಿಬ್ಬರ ಕಂಠದಲ್ಲಿ ಉಳಿದುಕೊಂಡೇ ಇದೆ. (ಪಂಚಮ ಸ್ವರವು ಷಟಜ್ ಸ್ವರದ ಒಂದೂವರೆ ಪಟ್ಟು ಎತ್ತರದ ಕಂಪನದಲ್ಲಿರುತ್ತದೆ ಎಂದು ಧ್ವನಿ ಶಾಸ್ತ್ರದಲ್ಲಿಯೂ ಪ್ರಯೋಗಸಿದ್ಧವಾಗಿದೆ..) ಒಟ್ಟಾರೆಯಾಗಿ ಪುರಷರ ನಾಲ್ಕು ಸ್ವರಗಳು ಮತ್ತು ಸ್ತ್ರೀಯರ ನಾಲ್ಕು ಸ್ವರಗಳು ಅನುಕ್ರಮವಾಗಿ ಒಂದೂವರೆ ಪಟ್ಟು ಎತ್ತರದಷ್ಟು ಕಂಪನದಲ್ಲಿರುವುದರಿಂದ ಮತ್ತು ಅವೆಡರ ನಡುವಿನ ಸುಸಂವಾದವು ನಿಸರ್ಗಸಿದ್ಧವಾಗಿರುವುದರಿಂದ ಅದೇ ಸಂಗೀತಲೋಕದಲ್ಲಿ ಮತ್ತು ಜಗತ್ತಿನಲ್ಲಿ ಬಳಕೆಗೆ ಒದಗಿರಬೇಕು. ಮುಂದೆ ಕಾಲಾಂತರದಲ್ಲಿ ತಂತುವಾದ್ಯಗಳಲ್ಲಿನ ತಂತುಗಳ ನಾದವನ್ನು ಅವಲಂಬಿಸಿ ಈ ಷಡ್ಜ ಪಂಚಮ ಭಾವ ನೈಸರ್ಗಿಕವಾಗಿದೆ ಎಂದೇ ಭಾವಿಸಲ್ಪಟ್ಟಿತು ಎಂದು ಕಲ್ಪಿಸಿಕೊಳ್ಳಬಹುದಾಗಿದೆ. ಹೀಗೆ ಮಹಿಳೆ ಸಂಗೀತದ ಸಪ್ತಕದಲ್ಲಿ ಅರ್ಧಕ್ಕೆ (ಸಪ್ತಕದ ಉತ್ತರಾರ್ಧ) ನೇರವಾಗಿ ಹಕ್ಕುದಾರಳಾಗುತ್ತಾಳೆ. ಹೀಗೆ ಪ್ರಾಚೀನ ಕಾಲದಲ್ಲಿ ಸ್ವರಗಳು ಹುಟ್ಟಿಕೊಂಡ ಬಗೆಯನ್ನು ಊಹಿಸಲಾಗಿದೆ. ಇಂದಿಗೂ ಸಂಗೀತದಲ್ಲಿ ಷಡ್ಜ–ಪಂಚಮ ಭಾವವಿರುವುದನ್ನು ಗಮನಿಸಿದಾಗ ಈ ಊಹೆ ಸರಿಯಾದುದು ಎಂದೆನಿಸುತ್ತದೆ. ಆದರೆ ಸಂಗೀತದ ಇತಿಹಾಸಕಾರರು ಭಾರತೀಯ ಸಂಗೀತದ ಇತಿಹಾಸವನ್ನು ವೇದಗಳ ಕಾಲದಿಂದ ಆರಂಭಿಸುತ್ತಾರೆ. ಋಗ್ವೇದದಿಂದ ಪ್ರಾರಂಭವಾಗುವ ವೇದಗಳ ಕಾಲ ಸಾಮವೇದದ ವರೆಗೂ ವಿಸ್ತರಿಸಿಕೊಳ್ಳುತ್ತದೆ.

**ವೇದಗಳ ಕಾಲದ ಸಂಗೀತ**

ಸಂಗೀತದ ಕುರಿತಾಗಿ ಲಿಖಿತ ಉಲ್ಲೇಖಗಳು ದೊರೆಯುವುದು ವೇದಗಳ ಕಾಲದಲಿಯೇ. ಇದಕ್ಕಿಂತ ಮುಂಚಿನ ಕಾಲದಲ್ಲಿ ಸಂಗೀತ ಇದ್ದಿತಾದರೂ ಅದು ಯಾವ ರೀತಿಯಾಗಿತ್ತು ಎಂದು ಹೇಳುವ ಲಿಖಿತ ದಾಖಲೆಗಳು ಇಲ್ಲವೆಂಬ ಕಾರಣಕ್ಕಾಗಿ ಇತಿಹಾಸಕಾರರು ಭಾರತೀಯ ಸಂಗೀತದ ಇತಿಹಾಸವನ್ನು ವೇದಗಳ ಕಾಲದಿಂದ ಪ್ರಾರಂಭಿಸುತ್ತಾರೆ. ಈ ಕಾಲದಲ್ಲಿ ಸಂಗೀತದ ಸ್ಥಿತಿಗತಿ ಹೇಗಿತ್ತು ಎಂಬುದನ್ನು ಗಮನಿಸೋಣ. " ಋಗ್ವೇದದ ಕಾಲದಲ್ಲಿ ಸಂಗೀತದ ಬೆಳವಣಿಗೆ ಮನೆಯೊಳಗೆ ನಡೆದಷ್ಟು ಹೊರಗೆ ನಡೆಯಲಿಲ್ಲ. ಸಂಗೀತದ ಕಾರ್ಯಕ್ರಮ ಸಾರ್ವಜನಿಕ ಸ್ಥಳಗಳಲ್ಲಿಯೂ ಆಗುತ್ತಿತ್ತು. ಆದರೆ ಇಂತಹ ಸಂದರ್ಭಗಳು ತೀರ ಕಡಿಮೆ. ಪುರುಷರ ದಿನಚರಿ ಅನಿಶ್ಚಿತವಾಗಿತ್ತು. ಆದರೂ ಅವರಿಗೆ ಬೆಳಗಿನ ಹಾಗೂ ಸಂಜೆಯ ಸಮಯದಲ್ಲಿ ಸಂಗೀತಕ್ಕೆ ಸಮಯ ದೊರಕುತ್ತಿತ್ತು. ಏಕೆಂದರೆ ಆ ಸಮಯದಲ್ಲಿ ಅವರು ತಮ್ಮ ಇಷ್ಟ ದೇವತೆಗಳ ಆರಾಧನೆಯನ್ನು ಸಂಗೀತಮಯ ಪ್ರಾರ್ಥನೆಗಳಿಂದ ಮಾಡುತ್ತಿದ್ದರು. ಕೆಲವು ಸಲ ಸೋಮರಸ ಪಾನ ಮಾಡಿ ಸ್ತ್ರೀಯರು ಹಾಗೂ ಪುರುಷರು ಸಾಮೂಹಿಕ ನೃತ್ಯಗಳನ್ನು ಮಾಡುತ್ತಿದ್ದರು. ಈ ಸಂಗೀತ ಹಾಗೂ ನೃತ್ಯ ಕಾರ್ಯಕ್ರಮ ಸಾಕಷ್ಟು ಗಂಟೆಗಳ ಕಾಲ ನಡೆಯುತ್ತಿತ್ತು" 13 ಇದು ಒಂದು ಬಗೆಯ ಸಂಗೀತವಾದರೆ ಇನ್ನೊಂದು ಬಗೆಯಲ್ಲಿನ ಸಂಗೀತದ ಪ್ರಯೋಜನವನ್ನು ನೋಡೋಣ. 'ಯಜ್ಞ ಯಾಗಾದಿಗಳ ವೇಳೆಯಲ್ಲಿ ಯಜಮಾನ ಅಥವಾ ಇಬ್ಬರು ಬ್ರಾಹ್ಮಣರು ಅಲ್ಲಿಯೇ ಗಾಥಾಗಳನ್ನು ನಿರ್ಮಿಸಿ ಹಾಡಬೇಕಾಗುತ್ತಿತ್ತು. ಅವರು ಹಾಡುವ ಗತಿಯಲ್ಲಿಯೂ ನಿಬಂಧನೆಗಳಿವೆ. ಮುಂಜಾನೆ ವೇಳೆಯಲ್ಲಿ ಮಂದಗತಿಯಲ್ಲಿಯೂ, ಮಧ್ಯಾಹ್ನ ಸ್ವಲ್ಪವೇಗವಾಗಿಯೂ ಮತ್ತು ಸಾಯಂಕಾಲದ ಸಮಯ ವೇಗವಾಗಿಯೂ ಹಾಡಬೇಕೆಂದಬ ನಿಯಮವಿದೆ. ಹಾಡುವಾಗ ಅಥವಾ ಅಭ್ಯಸಿಸುವಾಗ ಕಿಂಚಿತ್ ತಪ್ಪಿದರೆ ಯಾಗವು ವಿಫಲವಾಗುತ್ತಿತ್ತು.' 14

ಋಗ್ವೇದದ ನಂತರದ ಕಾಲ ಯಜುರ್ವೇದ. ಈ ಕಾಲದಲ್ಲಿ ಮಂತ್ರಗಳನ್ನು ಸ್ವರಗಳಲ್ಲಿ ಹಾಡಲಾಗುತ್ತಿತ್ತು. ಯಜುರ್ವೇದವು ಆ ಕಾಲದ ಕೆಲವು ವಾದ್ಯಗಳನ್ನು ಉಲ್ಲೇಖಿಸುತ್ತದೆ. ಅವುಗಳಲ್ಲಿ ಮುಖ್ಯವಾಗಿ ವೀಣೆ, ಪಣವ, ವಾಣ, ಶಂಖ, ದುಂದುಭಿ, ಭೂದುಂದುಭಿ, ತಲವ ಇತ್ಯಾದಿಗಳನ್ನು ಉಲ್ಲೇಖಿಸಲಾಗಿದೆ. ಗಾಯನದ ಜೊತೆಗೆ ಸಹವಾದ್ಯವನ್ನಾಗಿ ವೀಣೆಯನ್ನು ಬಳಸುತ್ತಿದ್ದ ವಿವರಣೆ ಬಹಳ ಮಹತ್ವದ್ದಾಗಿದೆ.

ಹೀಗೆ ಯಜುರ್ವೇದದ ಕಾಲದಲ್ಲಿಯೂ ಸಂಗೀತ ಯಜ್ಞಯಾಗಾದಿಗಳ ಸಮಯದಲ್ಲಿ, ಸಮೂಹಗಾನದಲ್ಲಿ ಪ್ರಯೋಗಿಸಲ್ಪಡುತ್ತಿತ್ತು.

ವೇದಾನಾಂ ಸಾಮವೇದೋಸ್ಮಿ ಎಂದು ಶ್ರೀ ಕೃಷ್ಣನು ಭಗವದ್ಗೀತೆಯಲ್ಲಿ ಹೇಳಲು ಮುಖ್ಯ ಕಾರಣವೆಂದರೆ ಅದು ಸಂಗೀತ ಪ್ರಧಾನವಾದ ವೇದವಾಗಿರುವುದು. ಶ್ರೀ ಕೃಷ್ಣನು ಮಹಾಭಾರತ ಕಾಲದ ಶ್ರೇಷ್ಠ ಕೊಳಲು ವಾದಕನಾಗಿದ್ದನೆಂದು ತಿಳಿದುಬರುತ್ತದೆ. ಸಪ್ತಸ್ವರಗಳ ವಿಕಾಸವು ಆಗಿದ್ದು ಸಾಮವೇದ ಕಾಲದಲ್ಲಿಯೇ. ಋಗ್ವೇದದ ಕಾಲದಲ್ಲಿ ಮೂರು ಸ್ವರಗಳು ಮಾತ್ರ ಪ್ರಚಲಿತವಿದ್ದು ಸಾಮವೇದದ ಕಾಲದಲ್ಲಿ ಎಲ್ಲ ಏಳು ಸ್ವರಗಳು ಬಳಕೆಯಲ್ಲಿದ್ದುವು ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಸಂಗೀತ ಮತ್ತು ವೇದಗಳ ಸಂಬಂಧವನ್ನು ಇತಿಹಾಸದಲ್ಲಿ ಹೀಗೆ ಗುರುತಿಸಲಾಗಿದೆ. ವೇದಗಳ ಸಂಹಿತೆಯ ಪ್ರಾರಂಭದಲ್ಲಿ ಋಚಗಳನ್ನು ಎತ್ತರವಾದ ಒಂದೇ ದನಿಯಲ್ಲಿ ಹೇಳಲಾಗುತ್ತಿತ್ತು. ಹೀಗೆ ಒಂದೇ ಸ್ವರದಲ್ಲಿ ಋಚಗಳನ್ನು ಹಾಡುವ ರೀತಿಯನ್ನು 'ಉದಾತ್ತ' ಎಂದು ಗುರುತಿಸಲಾಯಿತು. ಇತಿಹಾಸದಲ್ಲಿ ಈ ಕಾಲವನ್ನು 'ಅರ್ಚಿಕ' ಎನ್ನಲಾಗಿದೆ. ಕಾಲಾಂತರದಲ್ಲಿ ಉದಾತ್ತದ ಜೊತೆಗೆ ಋಚಗಳನ್ನು ಕೆಳಸ್ವರದಲ್ಲಿಯೂ ಅನ್ನುವ ಪದ್ಧತಿ ಪ್ರಾರಂಭವಾಯಿತು. ಈ ಕೆಳಸ್ವರವನ್ನು 'ಅನುದಾತ್ತ' ಎಂದು ಕರೆಯಲಾಯಿತು. ಈ ಕಾಲವನ್ನು 'ಗಾಥಾ' ಎಂದು ಇತಿಹಾಸವು ಗುರುತಿಸುತ್ತದೆ. ಋಗ್ವೇದ ಮತ್ತು ಯಜುರ್ವೇದಗಳ ಕಾಲದಲ್ಲಿ ಈ ರೀತಿಯ ಉದಾತ್ತ ಮತ್ತು

ಅನುದಾತ್ತಗಳಿಂದ ವೇದ ಋಚಗಳನ್ನು ಅನ್ನುವ ಪದ್ಧತಿ ಜಾರಿಯಲ್ಲಿದ್ದಂತೆ ತೋರುತ್ತದೆ. ಸಾಮವೇದವು ಮೂರನೆಯ ಸ್ವರದ ಪ್ರವೇಶವನ್ನು ತನ್ನ ಪ್ರಾರಂಭಾವಸ್ಥೆಯಲ್ಲಿ ಮಾಡಿಸಿತು. ಉದಾತ್ತ ಮತ್ತು ಅನುದಾತ್ತ ಸ್ವರಗಳ ಮಧ್ಯ ಒಂದು ಸ್ಥಾನವಿರುವುದನ್ನು ಇದು ಗುರುತಿಸಿ, ಆ ಸ್ಥಾನವನ್ನು 'ಸ್ವರಿತ'ವೆಂದು ಕರೆಯಲಾಯಿತು. ಈ ಕಾಲವನ್ನು 'ಸಾಮಿಕ ಯುಗ'ವೆಂದು ಇತಿಹಾಸ ವಿವರಿಸುತ್ತದೆ. ಸಾಮವೇದದ ಕಾಲದಲ್ಲಿಯೇ ಸ್ವರಗಳ ಸಂಶೋಧನೆ ಮುಂದುವರಿಯಿತು. ಉದಾತ್ತಕ್ಕಿಂತಲೂ ಎತ್ತರದಲ್ಲಿರುವುದನ್ನು 'ಉದಾತ್ತತರ'ವೆಂತಲೂ, ಈ ಕಾಲವನ್ನು 'ಸ್ವರಾಂತರ'ವೆಂತಲೂ ಕರೆಯಲಾಯಿತು. ಅನುದಾತ್ತ ಸ್ವರಕ್ಕಿಂತಲೂ ಇಳಿವಿನಲ್ಲಿರುವುದನ್ನು ಗುರುತಿಸಿ ಅದನ್ನು 'ಮಂದ್ರ' ಎಂದು ಕರೆಯಲಾಯಿತು. ಈ ಐದು ಸ್ವರಗಳನ್ನು 'ಔಢವ' ಎಂದು ಕರೆದರು. ಇದಕ್ಕೆ ಇನ್ನೊಂದು ಸ್ವರ ಸೇರಿಕೊಂಡಾಗ ಅದು 'ಷಾಢವ' ಎನಿಸಿಕೊಂಡಿತು. ಏಳನೆಯ ಸ್ವರ ಸೇರಿದಾಗ 'ಸಂಪೂರ್ಣ'ವಾಯಿತು. ಈ ಎಲ್ಲ ಏಳು ಸ್ವರಗಳನ್ನು ಸಾಮವೇದದಲ್ಲಿ ಪ್ರಥಮ, ದ್ವಿತೀಯ, ತೃತೀಯ, ಚತುರ್ಥ, ಪಂಚಮ, ಮಂದ್ರಕೃಷ್ಟ, ಅನಿಸ್ವಾರಗಳೆಂದು ಗುರುತಿಸಲಾಗಿದೆ. ಕೆಲವು ಕಡೆಗಳಲ್ಲಿ ಕೊನೆಯ ಸ್ವರವನ್ನು ಅತಿಕೃಷ್ಟ ಎಂತಲೂ ಗುರುತಿಸಲಾಗಿದೆ.

ಸಾಮವೇದದಲ್ಲಿ ಬಳಸಲಾಗುತ್ತಿದ್ದ ಏಳು ಸ್ವರಗಳನ್ನು ಆಧುನಿಕಕಾಲದಲ್ಲಿನ ಸ್ವರಗಳೊಂದಿಗೆ ಹೋಲಿಸುವ ಪ್ರಯತ್ನವನ್ನು ನಮ್ಮ ಸಂಗೀತ ಶಾಸ್ತ್ರಜ್ಞರು ಮಾಡುತ್ತಾರೆ. ಡಾ.ಬಿ.ಡಿ.ಪಾಠಕರು ತಮ್ಮ ಭಾರತೀಯ ಸಂಗೀತ ಚರಿತ್ರೆ ಎಂಬ ಗ್ರಂಥದಲ್ಲಿ ಇವುಗಳ ಪಟ್ಟಿಯನ್ನು ಒದಗಿಸುತ್ತಾರೆ. ಸಾಮಸ್ವರದ ಪ್ರಥಮ ಸ್ವರವು ಮಧ್ಯಮ, ದ್ವಿತೀಯ ಸ್ವರವು ಗಾಂಧಾರ, ತೃತೀಯ ಸ್ವರವು ರಿಷಭ, ಚತುರ್ಥವು ಷಟ್ಜ, ಪಂಚಮವು ಧೈವತ, ಮಂದ್ರಕೃಷ್ಟವು ನಿಷಾದ, ಹಾಗೂ ಅನಿಸ್ವಾರ ಅಥವಾ ಅತಿಕೃಷ್ಟವು ಪಂಚಮವೆಂದು ವಿವರಿಸಲಾಗಿದೆ. ಅಂದರೆ, ಸಮಕಾಲೀನ ಸ್ವರಗಳನ್ನು ಸಾಮವೇದದ ಸ್ವರಗಳಿಗೆ ಅನ್ವಯಿಸಿ ಸಪ್ತಕವನ್ನು ನಿರ್ಮಿಸಿದರೆ 'ಮ ಗ ರೆ ಸ ಧ ನಿ ಪ' ಎಂದಾಗುತ್ತದೆ.

ಈ ಎಲ್ಲ ಸ್ವರಗಳು ಯಾರಿಗೆ ಪ್ರಿಯವಾಗಿವೆ ಎಂದು ಆರೋಪಿಸುವ ಕಾರ್ಯವನ್ನೂ ಸಾಮವೇದದ ಕಾಲದಲ್ಲಿಯೇ ಮಾಡಲಾಯಿತು. ಅದರನ್ವಯ, ಮಧ್ಯಮ ಸ್ವರವು ಮಾನವರಿಗೂ, ಗಾಂಧಾರವು ಗಂಧರ್ವ ಮತ್ತು ಅಪ್ಸರೆಯರಿಗೂ, ರಿಷಭವು ಪಶುಗಳಿಗೂ, ಷಡಜ್‌ವು ಪಿತೃಗಳಿಗೂ ಮತ್ತು ಅಜಾತಶಿಶು(ಗರ್ಭದಲ್ಲಿರುವ ಮಗು)ವಿಗೂ, ಧೈವತವು ಔಷಧಿ ಹಾಗೂ ವನಸ್ಪತಿಗಳಿಗೂ, ನಿಷಾದವು ರಾಕ್ಷಸರಿಗೆ ಮತ್ತು ವನ್ಯಜೀವಿಗಳಿಗೆ ಹಾಗೂ ಕೊನೆಯದಾಗಿ ಪಂಚಮ ಸ್ವರವು ದೇವತೆಗಳಿಗೆ ಪ್ರಿಯವಾಗಿದೆ ಎಂದು ವರ್ಗೀಕರಿಸಲಾಗಿದೆ. ಇದೇ ಕಾರಣಕ್ಕೆ ಕೃಷ್ಣನ ಕೊಳಲು 'ಪಂಚಮ' ಸ್ವರಕ್ಕೆ ಶ್ರುತಿ ಮಾಡಲ್ಪಟ್ಟಿತ್ತು ಎಂಬ ಉಲ್ಲೇಖಗಳು ಕಾಣಸಿಗುತ್ತವೆ.

ಹೀಗೆ ಸಾಮವೇದದ ಕಾಲವು ಐತಿಹಾಸಿಕವಾಗಿ ಸಪ್ತಸ್ವರಗಳ ಉಗಮಕಾಲ ಎಂದು ಭಾವಿಸಲಾಗಿದೆ ಮತ್ತು ಸಂಗೀತ ಶಾಸ್ತ್ರದ ದೃಷ್ಟಿಯಿಂದ ಹೇಳುವುದಾದರೆ ಸಾಮವೇದದ ಕಾಲವನ್ನು ಮಹತ್ವದ ಒಂದು ಮೈಲಿಗಲ್ಲು ಎಂದು ಭಾವಿಸಬೇಕಾ

**ಆಕರ ಸೂಚಿ**


1. ಗೋವಿಂದರಾವ ಟೇಂಬೆ – ಕಲ್ಪನಾ ಸಂಗೀತ ಪು. 3
2. –ಅದೇ–
3. ಪಂ. ಬಿ.ಡಿ.ಪಾಠಕ – ಭಾರತೀಯ ಸಂಗೀತ ಚರಿತ್ರೆ ಪು.1
4. ಆಚಾರ್ಯ ಬೃಹಸ್ಪತಿ – ಭಾರತ ಕೆ ಸಂಗೀತಕಾರ ಪು.2
5. ಕೈಲಾಶಚಂದ್ರದೇವ ಬೃಹಸ್ಪತಿ – ಭರತ ಕಾ ಸಂಗೀತ ಸಿದ್ಧಾಂತ ಪು.31
6. ಚಂಪಕಲಾಲ ಸಿ. ನಾಯಕ – ಸಂಗೀತ ಕಿ ಆಧ್ಯಾತ್ಮಿಕ ಪರಂಪರಾ ಲೇಖನ. ಲಕ್ಷ್ಯ ಸಂಗೀತ ಸಂಚಿಕೆ ಜನೆವರಿ – 1955
7. ಪುರಂದರದಾಸರು – ಪುರಂದರದಾಸರ ಉಗಾಭೋಗಗಳು ಮತ್ತು ಸುಳಾದಿಗಳು ಪು.34 (ಸಂ–ಡಾ. ವಸಂತ ಕುಷ್ಟಗಿ)
8. ವಸಂತ – ಸಂಗೀತ ಪರಿಷತ್ ಪತ್ರಿಕೆ ಅಕ್ಟೋಬರ್ 1954 ಪು.18
9. –ಅದೇ–
10. ಮತಂಗ – ಬೃಹದ್ದೇಶಿ ಪು.7 (ಸಂ.ಡಾ.ರಾ ಸತ್ಯನಾರಾಯಣ)
11. ಪಂ. ಬಿ.ಡಿ.ಪಾಠಕ – ಭಾರತೀಯ ಸಂಗೀತ ಚರಿತ್ರೆ ಪು.8
12. ಗೋವಿಂದರಾವ ಟೇಂಬೆ – ಕಲ್ಪನಾ ಸಂಗೀತ ಪು. 3
13. ಪಂ. ಬಿ.ಡಿ.ಪಾಠಕ – ಭಾರತೀಯ ಸಂಗೀತ ಚರಿತ್ರೆ ಪು.15
14. ಡಾ.ಆರ್.ಎನ್. ಶ್ರೀಲತಾ – ಕರ್ನಾಟಕದಲ್ಲಿ ಸಂಗೀತ ಮನೋಧರ್ಮ – ಪು.8
15. ರಾಜೀವ ಹಿರೇಮಠ – ಸಂಗೀತ ಸಂಜೀವಿನಿ – ಪು.2.
16. ಶಿರೀಷ ಜೋಶಿ – ಸಂಗೀತ ಮತ್ತು ಅಧ್ಯಾತ್ಮ – ಭಾವಶಂಕರ ಪು.59
17. – ಅದೇ –
18. ಭಗವದ್ಗೀತೆ – ಅಧ್ಯಾಯ – 10, ಶ್ಲೋಕ 22.
19. ರಹಮತ್ ತರೀಕೆರೆ – ಕರ್ನಾಟಕದ ಸೂಫಿಗಳು, ಪು.233
20. ವಸಂತ – ಸಂಗೀತ ವಿಶಾರದ ಪು. 232
21. ಗುತ್ತದೆ.